# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆ: ಸ್ಪೆಷಲ್ ಎಸ್.ವಿ.ಸಿ.6/2019

ಅ.ಸಾ : 3
ದೋಸಾ : 3

ಸಾಕ್ಷಿದಾರರ ಹೆಸರು : ಸಿದ್ದರಾಜು ಎಲ್

ತಂದೆಯ ಹೆಸರು : ಲಿಂಗರಾಜು

ವಯಸ್ಸು : 49 ವರ್ಷ

ಉದ್ಯೋಗ : ಶಿಕ್ಷಕರು

ವಾಸ ಸ್ಥಳ : ಚಾಮರಾಜನಗರ.

ದಿನಾಂಕ:**09/08/2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರಿಂದ: –**

1. ನಾನು ಹಾವೇರಿಯ ಸರ್ಕಾರಿ ಪ್ರಾಥಮಿಕ ಶಾಲೆ ತಿಮ್ಮಾಪುರದಲ್ಲಿ 2007 ರಿಂದ 2021 ರವರೆಗೆ ಶಿಕ್ಷಕರಾಗಿ ಕೆಲಸ ನಿರ್ವಹಿಸಿದ್ದೆ.

2. ದಿನಾಂಕ:27/2/2018 ರಂದು ಮದ್ಯಾಹ್ನ 12-00 ಘಂಟೆಗೆ ಹಾವೇರಿ ಬಿಇಓ ಕಛೇರಿಯಿಂದ ಲೋಕಾಯುಕ್ತ ಕಛೇರಿಗೆ ಕೆಲಸದ ಮೇಲೆ ಕಳಿಸಿದ್ದೇವೆಂತಾ ಫೋನ್ ಮಾಡಿ ತಿಳಿಸಿ ನಂತರ ಮೆಮೋ ಕೊಟ್ಟಿರುತ್ತಾರೆ. ಮದ್ಯಾಹ್ನ 1-00 ಘಂಟೆಗೆ ಎಸಿಬಿ ಕಛೇರಿ ಹಾವೇರಿಗೆ ಹೋದೆವು. ಚಾಸಾ-1 ಮತ್ತು 2 ಕಛೇರಿಯಲ್ಲಿದ್ದರು. ಚಾಸಾ-27, ಡಿವೈಎಸ್‌ಪಿ ಮತ್ತು ಪೊಲೀಸ್ ಸಿಬ್ಬಂದಿ ಇದ್ದರು. ಚಾಸಾ-27 ನಮಗೆ ಹೇಳಿದ್ದೇನೆಂದರೆ, ಆರೋಪಿ ಖಾತೆ ಬದಲಾವಣೆಗೆ ಹಣ ಕೇಳಿದ್ದಾರೆ. ಅದಕ್ಕಾಗಿ ಚಾಸಾ-1 ದೂರು ಕೊಟ್ಟಿರುತ್ತಾರೆಂತಾ ದೂರನ್ನು ತೋರಿಸಿ ಹೇಳಿದರು.

3. ಚಾಸಾ-1 ಲಂಚದ ಹಣ ಕೊಡಲು ತಯಾರಿಲ್ಲ. ಅದಕ್ಕಾಗಿ ಪಂಚನಾಮೆ ಮಾಡುವುದಿದೆ ಅಂತಾ ಹೇಳಿದರು. ಚಾಸಾ-1 ಮತ್ತು ಆರೋಪಿಯ ಧ್ವನಿ ಇರುವ ಸಂಭಾಷಣೆಯನ್ನು ನಮಗೆ ಕೇಳಿಸಿದರು. ಚಾಸಾ-27 ತನಿಖೆ ರೇಡಿನ ವಿಷಯ ತಿಳಿಸಿದರು. ಸದರಿ ವಿಷಯವನ್ನು ಸಿ.ಡಿ. ಮಾಡಿ ಕೇಳಿಸಿದರು, ತೋರಿಸಿದರು. ಅದನ್ನು ನೋಡಿದರೆ ಗುರುತಿಸುತ್ತೇನೆ. ಚಾಸಾ-27 ಸೋಡಿಯಂ

ಕಾರ್ಬೋನೇಟ್ ದ್ರಾವಣವನ್ನು ಮತ್ತು ಪಿನಾಪ್ತಲೀನ್ ಪೌಡರ್ ತೋರಿಸಿ ಸ್ಯಾಂಪಲ್ ತೆಗೆದರು. ಸದರಿ ಸ್ಯಾಂಪಲ್ ದ್ರಾವಣವನ್ನು ಮುಮಾ-6 ಅಂತಾ ಗುರುತಿಸಲಾಯಿತು. ಚಾಸಾ-1 ರವರು ಚಾಸಾ-27 ರವರ ಹತ್ತಿರ 500/- ರೂಪಾಯಿ ದರದ 6 ನೋಟುಗಳನ್ನು ಕೊಟ್ಟರು. (ಒಟ್ಟಿಗೆ ರೂ.3,000/- ಹಣ ಕೊಟ್ಟರು.) ನೋಟುಗಳ ಕ್ರಮ ಸಂಖ್ಯೆಯನ್ನು ಬರೆಯಲಾಯಿತು.

4. ಚಾಸಾ-27 ರವರು ನೋಟುಗಳ ಬಗ್ಗೆ ಚೆಕಲಿಸ್ಟ ಮಾಡಿರುತ್ತಾರೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಚೆಕಲಿಸ್ಟ ಮೇಲೆ ಸಹಿ ನೋಡಿ ಗುರುತಿಸುತ್ತಾರೆ. ನಿಪಿ-63 ಕ್ಕೆ, ಸಾಕ್ಷಿ ಸಹಿ ನಿಪಿ-63(ಬಿ) ಅಂತಾ ಗುರುತಿಸಲಾಯಿತು. ಸದರಿ ನೋಟುಗಳನ್ನು ಒಂದು ಕವರನಲ್ಲಿ ಹಾಕಿ ಇಡಲಾಯಿತು.

5. ಸದರಿ ನೋಟುಗಳಿಗೆ ಪಿನಾಪ್ತಲೀನ್ ಪೌಡರ್ನ್ನು ಸವರಲಾಯಿತು. ಸದರಿ ನೋಟುಗಳನ್ನು ಮುಟ್ಟಿದ ಮೇಲೆ ಚಾಸಾ-2 ಕೈತೊಳೆಸಿದರು. ಅದು ಪಿಂಕ ಬಣ್ಣದ ದ್ರಾವಣಕ್ಕೆ ಪರಿವರ್ತನೆಯಾಯಿತು. ಸದರಿ ದ್ರಾವಣವನ್ನು ಬಾಟಲನಲ್ಲಿ ಹಾಕಿ ಜಪ್ತಿಮಾಡಿರುತ್ತಾರೆ. ಸದರಿ ಬಾಟಲನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ಮುಮಾ-1 ಅಂತಾ ಈಗಾಗಲೇ ಗುರುತಿಸಲಾಗಿದೆ. ಚಾಸಾ-27 ರವರು ಚಾಸಾ-1 ರವರಿಗೆ ವಿಷಯ ತಿಳಿಸಿ, ನೋಟುಗಳನ್ನು ಕವರನಲ್ಲಿ ಹಾಕಿ ಚಾಸಾ-1 ರವರಿಗೆ ಕೊಟ್ಟರು. ಅವರು ಕಿಸೆಯಲ್ಲಿ ಇಟ್ಟುಕೊಂಡರು.

6. ಚಾಸಾ-2, ಚಾಸಾ-1 ಮತ್ತು ಚಾಸಾ-1 ರವರ ತಾಯಿ ಹೊರಟು ಆಟೋದಲ್ಲಿ ಗುತ್ತಲ ರಸ್ತೆಯ ಗ್ರಾಮ ಲೆಕ್ಕಾಧಿಕಾರಿ ಕಛೇರಿಗೆ ಅದೇ ದಿನ ಮಧ್ಯಾಹ್ನ 3-00 ಘಂಟೆಗೆ ಹೋದೆವು. ನಾನು ಚಾಸಾ-27 ಜೊತೆ ಜೀಪಿನಲ್ಲಿ ಇದ್ದೆ. ಚಾಸಾ-1 ಕರ್ಚಿಫನಿಂದ ಮುಖ ಒರೆಸಿ ಸಂಜ್ಞೆ ಮಾಡಿರುತ್ತಾರೆ. ನಂತರ ನಾವು ಒಳಗಡೆ ಹೋಗಿ ಆರೋಪಿಗೆ ಕೇಳಿದೆವು. ಚಾಸಾ-2 ಗೆ ಘಟನೆ ಬಗ್ಗೆ ಕೇಳಿದೆವು. ಚಾಸಾ-2 ನಮಗೆ ಹೇಳಿದ್ದೇನೆಂದರೆ ಆರೋಪಿ ಫಿರ್ಯಾದಿಯಿಂದ ಲಂಚದ ಹಣವನ್ನು ಪಡೆದರು ಅಂತಾ ಹೇಳಿದರು.

7. ಆರೋಪಿ ಲಂಚದ ಹಣವನ್ನು ಟೇಬಲ್ ಮೇಲೆ ಬಟ್ಟೆ ಮುಚ್ಚಿತ್ತು ಅಂತಾ ಹೇಳಿದರು. ಆರೋಪಿಯ ಕೈಯನ್ನು ಲೋಕಾಯುಕ್ತ ಪೊಲೀಸರು ಮತ್ತು ಸಿಬ್ಬಂದಿ ಬಂದು ಆರೋಪಿಯ ಕೈಯನ್ನು ದ್ರಾವಣದಿಂದ ತೊಳೆಸಿದರು. ಆಗ ನೀರು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಯಿತು. ಸದರಿ ಬದಲಾವಣೆ ಗೊಂಡ ದ್ರಾವಣವನ್ನು ಬಾಟಲನಲ್ಲಿ ಹಾಕಿ ಜಪ್ತಿಮಾಡಿರುತ್ತಾರೆ. ಸದರಿ ಬಾಟಲನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ಮುಮಾ-2 ಅಂತಾ ಈಗಾಗಲೇ ಗುರುತಿಸಲಾಗಿದೆ. ಟೇಬಲ್ ಮೇಲೆ ಬಟ್ಟೆ ಮತ್ತು ಹತ್ತಿಯಿಂದ ವಸ್ತುಗಳನ್ನು ಒರೆಸಿ ಇಟ್ಟರು. ಸದರಿ ಹತ್ತಿಯನ್ನು ಪ್ಯಾಕ್

ಮಾಡಿ ಸೀಲ್ ಮಾಡಿ ಇಡಲಾಯಿತು. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ಮುಮಾ-7 ಅಂತಾ ಗುರುತಿಸಲಾಯಿತು.

8. ಆರೋಪಿ ಕಡೆಯಿಂದ ಕರೆನ್ಸಿ ನೋಟುಗಳನ್ನು ಪಡೆದು ಸೀಲ್ ಮಾಡಿ ಹಾಕಲಾಯಿತು. ಸದರಿ ನೋಟುಗಳು ನಿಪಿ-3 ರಲ್ಲಿ ನಮೂದಿಸಿದ ನೋಟುಗಳಿಗೆ ಹೊಂದಾಣಿಕೆ ಆಗುತ್ತಿತ್ತು. ಮುಮಾ-3 ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆರೋಪಿಯ ಅಂಗವನ್ನು ಚೆಕ್ ಮಾಡಿದಾಗ ಚಾಲನಾ ಪತ್ರ, ಆಧಾರ ಕಾರ್ಡ, ಬ್ಯಾಂಕ್ ಪಾಸ್ ಬುಕ್, ಕರ್ಚಿಫ, ಆರೋಪಿ ಮೊಬೈಲ್ ಮತ್ತು ಇತರ ವಸ್ತುಗಳನ್ನು ಜಪ್ತಿ ಮಾಡಿದರು.

9. ಗುಲಾಬಿ ಬಣ್ಣದ ದ್ರಾವಣವನ್ನು ಕೂಡಾ ಬಾಟಲಿನಲ್ಲಿ ಶೇಖರಿಸಿ ಜಪ್ತಿ ಮಾಡಲಾಯಿತು. ಸದರಿ ದ್ರಾವಣ ಇರುವ ಬಾಟಲನ್ನು ನೋಡಿ ಗುರುತಿಸಲಾಯಿತು. ಅದನ್ನು ಮುಮಾ-8 ಅಂತಾ ಗುರುತಿಸಲಾಯಿತು. ನಿಪಿ-2 ಮತ್ತು 3 ರಮೇಲೆ ಸಾಕ್ಷಿಯ ಸಹಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-2 (ಸಿ) ಮತ್ತು ನಿಪಿ-3(ಸಿ) ಅಂತಾ ಗುರುತಿಸಲಾಯಿತು. ಪೊಲೀಸರು ಆರೋಪಿಯನ್ನು ಲಂಚ ಹಣ ಪಡೆದ ಬಗ್ಗೆ ದಸ್ತಗಿರ ಮಾಡುತ್ತೇವೆ ಅಂತಾ ಹೇಳಿದರು. ಆರೋಪಿಯ ಮೇಲಾಧಿಕಾರಿಗಳಿಗೆ ಚಾಸಾ-27 ಘಟನೆ ವಿಷಯ ತಿಳಿಸಿದರು.

10. ಆರೋಪಿಯ ಮೇಲಾಧಿಕಾರಿಗಳೂ, ಚಾಸಾ-11 ಮತ್ತು ಚಾಸಾ-12 ಕೂಡಾ ಸ್ಥಳಕ್ಕೆ ಬಂದಿದ್ದರು. ನಿಪಿ-4 ರಿಂದ 53 ಬಣ್ಣದ ಫೋಟೋಗಳಲ್ಲಿ ಸಾಕ್ಷಿ ತನ್ನ ಮತ್ತು ಇತರರ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನೋಟಿನ ಮೇಲೆ ಇಟ್ಟ ಬಟ್ಟೆಯನ್ನು ಕೂಡಾ ಗುರುತಿಸಿದ್ದು ಅದನ್ನು ಮುಮಾ-9 ಅಂತಾ ಗುರುತಿಸಲಾಯಿತು.

11. (ಈ ಹಂತದಲ್ಲಿ ಮಾನ್ಯ ವಿಶೇಷ ಸರ್ಕಾರಿ ಅಬಿಯೋಜಕರು ಮುಖ್ಯ ವಿಚಾರಣೆಗೆ ವೇಳೆ ಕೇಳಿರುತ್ತಾರೆ. ವೇಳೆ ಕೊಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)
ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮತ್ತು ವಿಶೇಷ ನ್ಯಾಯಾಧೀಶರು, ಹಾವೇರಿ.